





ಹೊರವಲಯದ ಜೌಗು ಪ್ರದೇಶ (ವೆಟ್ ಲ್ಯಾಂಡ್) ನೀರು ಹಿಂಗುವ ಹಾಗೂ ಹಾದು ಹೋಗುವ ಪ್ರಮುಖ ಜಾಡು. ಅವುಗಳೆಲ್ಲಾ ಬಹುತೇಕ ಬಡಾವಣೆಗಳಾಗಿ ಪರಿವರ್ತನೆಗೊಳ್ಳುತ್ತಿವೆ. ದಾವಣಗೆರೆ ಹಾಗೂ ಶಿವಮೊಗ್ಗ ನಗರಗಳ ಹೊರವಲಯ ಗಮನಿಸಿದರೆ ಇದು ಸ್ಪಷ್ಟವಾಗಿ ಗೋಚರಿಸುತ್ತದೆ.

ಉಳಿದ ಕಡೆಯೂ ಹೀಗೆ ಇದೇ ಪರಿಸ್ಥಿತಿ. ಇಲ್ಲಿ ಬಡಾವಣೆಗಳಾದರೆ ಹರಿವ ನೀರಿಗೆ ಅಡ್ಡಗಾಲು ಬಿತ್ತೆಂದೇ ಅರ್ಥ. ವಾಡಿಕೆಗಿಂತ ಸ್ವಲ್ಪ ಹೆಚ್ಚು ಮಳೆ ಬಂದರೂ ನೀರು ಎತ್ತೆಂದರತ್ತ ನುಗ್ಗುತ್ತದೆ ಅಥವಾ ಅಲ್ಲೇ ನಿಲ್ಲುತ್ತದೆ.

ನದಿ ಒತ್ತುವರಿ ಮಾಡಿ ಮನೆಗಳನ್ನೋ ರೆಸಾರ್ಟುಗಳನ್ನೋ ಕಟ್ಟಿ 'ರಿವರ್ ವ್ಯೂ' ಎಂದು ಚೆಂದದ ಹೆಸರಿಡುವುದು, ಕೆರೆ ಕಬಳಿಸಿದ ಜಾಗದಲ್ಲಿ ಬಡಾವಣೆಗಳು, ಎತ್ತರದ ಅಪಾರ್ಟ್‌ಮೆಂಟುಗಳನ್ನು ಕಟ್ಟಿ 'ಲೇಕ್ ವ್ಯೂ' ಎಂದು ಕರೆಯುವುದು, ಆ ಮೂಲಕ ಗ್ರಾಹಕರನ್ನು ಸೆಳೆಯುವುದು ಇತ್ತೀಚಿನ ಟ್ರೆಂಡ್. ಮನೆ ಕೊಂಡವರು ವಾಸಕ್ಕೆ ಹೋಗಿ ಮೊದಲ ಮಳೆಗಾಲಕ್ಕೇ ಅದರ ಬಂಡವಾಳ ತಿಳಿಯುವುದು. ಈ ಪಡಿಪಾಟಲು ಬೀಳುವುದರ ಬದಲು ಮೊದಲೇ ಅಲ್ಲಿನ ಭೂವಿನ್ಯಾಸ ಗಮನಿಸಿದರೆ ಒಳ್ಳೆಯದು.